



Rotary

विश्वमित्रः

# ವಿಶ್ವಮಿತ್ರ

# VISHWAMITHRA

Weekly House Bulletin of Rotary Club Shimoga, R.I. Dist. 3182

Rotary THE MAGIC OF ROTARY 2024-25

Rtn. Stephanie A. Urchick
RI President 2024-25

Rtn. CA Dev Anand
District Governor 2024-25

Rtn. K. Sooryanarayana Udpa
President, Mob: 99009 66114

Rtn. N.G. Usha
Secretary, Mob : 81975 92278

Rtn. M. Madhavachar
Bulletin Editor, Mob: 98862 73495

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ – 67 ಸಂಚಿಕೆ –28 ದಿನಾಂಕ : 21–01–2025


## ದಿನಾಂಕ: 21.01.2025 ರ ವಾರದ ಸಭೆಯ ವರದಿ

ದಿನಾಂಕ: 21.01.2025 ರಂದು ನಮ್ಮ ಕ್ಲಬ್‌ನ ವಾರದ ಹಿಂದೂಡಿದ ಸಭೆ (ಪ್ರೀಪೋನ್ಡ್ ಮೀಟಿಂಗ್) ಭದ್ರಾವತಿ ರೋಟರಿ ಕ್ಲಬ್ ಜೊತೆಗೆ ಭದ್ರಾವತಿಯ ರೋಟರಿ ಸಭಾಭವನದಲ್ಲಿ ಏರ್ಪಾಡಾಗಿತ್ತು. ಅಂದು ಆ ಕ್ಲಬ್‌ನ ಸಂಸ್ಥಾಪನಾ ದಿನಾಚರಣೆಯಾಗಿದ್ದು, ಆ ಕ್ಲಬ್ ನಮ್ಮ ರೋಟರಿ ಕ್ಲಬ್ ಶಿವಮೊಗ್ಗದಿಂದ ಪ್ರಾಯೋಜಿಸಲ್ಪಟ್ಟ ಕ್ಲಬ್ ಆಗಿದುದರಿಂದ ನಮ್ಮ ಸದಸ್ಯರುಗಳಿಗೆ ಆಹ್ವಾನವಿತ್ತಿದ್ದರು. ಅಂತೆಯೇ ನಮ್ಮ ಕ್ಲಬ್‌ನ 21 ಸದಸ್ಯರು ಆ ಸಭೆಯಲ್ಲಿ ಪಾಲ್ಗೊಂಡಿದ್ದರು. ಅಂದು ಮುಖ್ಯ ಅತಿಥಿಗಳಾಗಿ ಶ್ರೀ ಕ್ಷೇತ್ರ ಹೊರನಾಡಿನ ಅನ್ನಪೂರ್ಣ ದೇವಳದ ಧರ್ಮಕರ್ತರಾದಂತಹ ಡಾ.ಭೀಮೇಶ್ವರ ಜೋಷಿಯವರು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಸರ್ವರ ಮನಮುಟ್ಟುವಂತೆ ಮಾತನಾಡಿದುದು ಉಲ್ಲೇಖನೀಯ. ಅಂದು ವೇದಿಕೆಯ ಮೇಲೆ ಮುಖ್ಯ ಅತಿಥಿಗಳೊಂದಿಗೆ, ರೋಟರಿ ಕ್ಲಬ್, ಭದ್ರಾವತಿಯ ಅಧ್ಯಕ್ಷರಾದ ರೊ. ಜಿ. ರಾಘವೇಂದ್ರ ಉಪಾಧ್ಯಾಯ, ಕಾರ್ಯದರ್ಶಿ ರೊ.ನಿರಂಜನ್, ರೋಟರಿ ಜೋನ್ 10 ಸಹಾಯಕ ಗವರ್ನರ್ ರೊ.ಎಸ್.ಆರ್.ನಾಗರಾಜ್, ರೋಟರಿ ಕ್ಲಬ್ ಶಿವಮೊಗ್ಗದ ಅಧ್ಯಕ್ಷರಾದ ರೊ.ಕೆ.ಸೂರ್ಯನಾರಾಯಣ ಉಡುಪ ಮತ್ತು ಕಾರ್ಯದರ್ಶಿ ರೊ.ಎನ್. ಜಿ. ಉಷಾ, ರೋಟರಿ ಜೋನ್ 10 ರ ಲೆಫ್ಟಿನೆಂಟ್, ರೊ.ಆದರ್ಶ, ಭದ್ರಾವತಿ ರೋಟರಿ ಕ್ಲಬ್‌ನ ಅನ್ಸ್ ಕ್ಲಬ್, ಅಧ್ಯಕ್ಷೆ ಶ್ರೀಮತಿ ರೂಪಾ ಶೈಲಜಾ, ಕಾರ್ಯದರ್ಶಿ ಲೀಲಾವತಿ ಶೆಟ್ಟರು ಉಪಸ್ಥಿತರಿದ್ದರು.



ಆರಂಭದಲ್ಲಿ ಡಾ.ಭೀಮೇಶ್ವರ ಜೋಷಿಯವರನ್ನು 18 ಜನ ಅನೆಟ್‌ರವರುಗಳಿಂದ ಪೂರ್ಣಕುಂಭ ಸ್ವಾಗತದೊಂದಿಗೆ ಆಹ್ವಾನಿಸಲಾಯಿತು. ಎಲ್ಲರೂ ವೇದಿಕೆಯನ್ನಲ್ಲಂಕರಿಸಿದ ನಂತರ ಶ್ರೀಮತಿ ಗೀತಾ ಬ್ಯಾಂಗಲೂರ್‌ರವರ ಸಮರ್ಥ ನಿರೂಪಣೆಯೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಕು.ಸಾನ್ವಿ ಮತ್ತು ಚಿ. ಭಾಸ್ಕರರವರಿಂದ ಪ್ರಾರ್ಥನೆಯಾಯಿತು. ರೋಟರಿ ಕ್ಲಬ್ ಭದ್ರಾವತಿಯ ಅಧ್ಯಕ್ಷ ರೊ. ಜಿ.ರಾಘವೇಂದ್ರ ಉಪಾಧ್ಯಾಯರವರಿಂದ ಸ್ವಾಗತವಾಯಿತು. ರೊ.





ಶೈಲೇಂದ್ರರವರಿಂದ ಕಾರ್ಯಕ್ರಮದ ಪ್ರಸ್ತಾವನೆಯಾಯಿತು. ಅವರು ಮಾತನಾಡುತ್ತಾ, ಇದು ನಮ್ಮ ಕ್ಲಬ್‌ನ 65 ನೇ ವರ್ಷದ ಸಂಸ್ಥಾಪನ ದಿನ ಎಂದು ತಿಳಿಸುತ್ತಾ, ಕ್ಲಬ್‌ನ ಬೆಳವಣಿಗೆಗೆ ಕಾರಣರಾದವರನ್ನು ಸ್ಮರಿಸಿದರು. ಅಲ್ಲದೇ ವಿ.ಐ.ಎಸ್.ಎಲ್ ನಿಂದ ಈ ನಿವೇಶನವನ್ನು 100 ವರ್ಷಗಳಿಗೆ ಒಪ್ಪಂದದಂತೆ ರೋಟರಿಗೆ ಕೇವಲ ರೂ.12/ ಕ್ಕೆ ಪಡೆದಿದ್ದು ಈಗ ರೂ.100

2ನೇ ಪುಟಕ್ಕೆ

## ಈ ವಾರದ ಸಭೆ

**ದಿನಾಂಕ: 29–01–2025, ಬುಧವಾರ** **ಸಂಜೆ 7:00**

### ಕೌಟುಂಬಿಕ ಸ್ನೇಹ ಮಿಲನ

**ಮುಖ್ಯ ಅತಿಥಿ: ಡಾ. ಕೆ.ಎಸ್. ಪವಿತ್ರ**

**ಮನೋ ವೈದ್ಯರು, ನೃತ್ಯ ಕಲಾವಿದರು ಹಾಗೂ ಲೇಖಕಿ**

**ಕಾರ್ಯಕ್ರಮ: ಜೀವನ ಮೌಲ್ಯಗಳು ಹಾಗೂ ದೇಶಭಕ್ತಿಯ ಬಗ್ಗೆ ನೃತ್ಯ ಪ್ರಾತ್ಯಕ್ಷಿಕೆ ಮತ್ತು ಉಪನ್ಯಾಸ**

ದಯವಿಟ್ಟು ರೋಟರಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ

ಸ್ಥಳ: **ರೋಟರಿ ಯುವ ಕೇಂದ್ರ**, ಸವಳಂಗ ರಸ್ತೆ, ಶಿವಮೊಗ್ಗ











ಆಗಿದೆ. ಇದಕ್ಕಾಗಿ ಸಹಕರಿಸಿದ ಅಧಿಕಾರಿಗಳಿಗೂ ಹಾಗೂ ಕ್ಲಬ್‌ನ ಎಲ್ಲಾ ಮಾಜಿ ಅಧ್ಯಕ್ಷರುಗಳಿಗೂ ಕೃತಜ್ಞತೆ ತಿಳಿಸಿದರು.

ರೊ. ಡಾ. ನಾಗರಾಜರವರು ಮುಖ್ಯ ಅತಿಥಿಗಳಾದ ರೊ.ಡಾ.ಭೀಮೇಶ್ವರ ಜೋಷಿಯವರ ಪರಿಚಯ ಮಾಡಿದರು. ನಮ್ಮ ಕ್ಲಬ್‌ನ ಕಾರ್ಯದರ್ಶಿ ರೊ.ಎನ್. ಜಿ. ಉಷಾರವರು ಪ್ರಕಟಣೆ ನೀಡಿದರು. ಅಲ್ಲದೇ ಈ ವಾರದಲ್ಲಿ ಅಧ್ಯಕ್ಷರಾದ ರೊ ಕೆ.ಸೂರ್ಯನಾರಾಯಣ ಉಡುಪರು ಮತ್ತು ರೊ.ಶ್ರೀಧರ್ ಕಾಮತ್‌ರವರು ಹುಟ್ಟು ಹಬ್ಬದ ಆಚರಿಸಿಕೊಂಡ ಹಿನ್ನೆಲೆಯಲ್ಲಿ ಅವರುಗಳನ್ನು ವೇದಿಕೆಯಲ್ಲಿ ಆಭಿನಂದಿಸಿದ್ದಲ್ಲದೇ ಭದ್ರಾವತಿ ಅನ್ಸ್ ಕ್ಲಬ್‌ನ ಶ್ರೀಮತಿ ಸವಿತಾ ಶಾಂತಕುಮಾರ್ ಎಲ್ಲಾ ಸೇರಿ ಕೇಕ್ ಕತ್ತರಿಸಿ ಹುಟ್ಟು ಹಬ್ಬದ ಸಂಭ್ರವನ್ನಾಚರಿಸಿಕೊಂಡರು.

ಕಾರ್ಯಕ್ರಮವು ವೇದಿಕೆಯ ಗಣ್ಯರಿಂದ ದೀಪ ಬೆಳಗುವುದರ ಮೂಲಕ ಉದ್ಘಾಟನೆಯಾಯಿತು. ನಂತರ ನಮ್ಮ ರೋಟರಿ ಕ್ಲಬ್‌ನ ಅಧ್ಯಕ್ಷರಾದ ರೊ ಕೆ.ಸೂರ್ಯನಾರಾಯಣ ಉಡುಪರು ಮಾತನಾಡಿ, ಈ ಕ್ಲಬ್ ತಮ್ಮ 65 ನೇ ಸಂಸ್ಥಾಪನಾ ದಿನವನ್ನಾಗಿ ಆಚರಿಸುತ್ತಿರುವುದು ಸಂತಸದ ಕ್ಷಣ. ಸತತವಾಗಿ ಒಳ್ಳೆ ಕೆಲಸವನ್ನು ಮಾಡಿಕೊಂಡು ಬಂದಿದ್ದು, ಇದು ನಮ್ಮ ರೋಟರಿ ಕ್ಲಬ್ ಶಿವಮೊಗ್ಗಕ್ಕೆ ಹೆಮ್ಮೆಯ ವಿಚಾರ ಮತ್ತು ನಮ್ಮ ರೋಟರಿ ಕ್ಲಬ್ ಈ ಕ್ಲಬ್‌ನ್ನು ಹುಟ್ಟು ಹಾಕಿರುವುದು ಸಂತಸದ ವಿಚಾರ ಎಂದರು. ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಅವಕಾಶಿಸಿದ ಕ್ಲಬ್‌ನ ಅಧ್ಯಕ್ಷ ರೊ.ರಾಘವೇಂದ್ರ ಉಪಾಧ್ಯಾಯ ಇವರಿಗೆ ಕೃತಜ್ಞತೆಗಳು ಎಂದರು. ಇದೇ ಸಂದರ್ಭದಲ್ಲಿ ನಮ್ಮ ರೋಟರಿ ಕ್ಲಬ್‌ನ ಕಾರ್ಯಗಳ ಬಗ್ಗೆ  ಬೆಳಕು ಚೆಲ್ಲಿದ ಉಡುಪರು, 1958 ರಂದು ಮೈಸೂರು ಮಹಾರಾಜ ಶ್ರೀ ಶ್ರೀಜಯಚಾಮರಾಜೇಂದ್ರ ಒಡೆಯರ್‌ರವರಿಂದ ಆರಂಭವಾದ ನಮ್ಮ ಕ್ಲಬ್ ಹಲವಾರು ಸಮುದಾಯ ಸೇವೆಗಳನ್ನು ಮಾಡಿದೆ ಎಂದರು. ಆಶಾಕಿರಣ, ಯುವಕೇಂದ್ರ, ಮತ್ತಿತರ ಸೇವೆಗಳೊಂದಿಗೆ ಈ ಸಾಲಿನಲ್ಲಿ ಹೊಸ ರೋಟರಾಕ್ಟ್ ಒಂದನ್ನು ಪ್ರಾರಂಭಿಸಿರುವುದರ ಬಗ್ಗೆ ತಿಳಿಸಿದರು. ಮನುಕುಲದ ಸೇವೆಯೇ ದೊಡ್ಡ ಸೇವೆ ಎಂದು ತಿಳಿಸುತ್ತಾ ಕೊನೆಯಲ್ಲಿ **"ಜೀವನದಲ್ಲಿರಬೇಕು ಉತ್ಸಾಹ-ಅದಕ್ಕೆ ಯಾರದೂ ಬೇಡ ಪ್ರೋತ್ಸಾಹ. ದೊಡ್ಡ ಸಮಸ್ಯೆಯೇ ನಿರುತ್ಸಾಹ-ಜೀವನೋತ್ಸಾಹವೇ ಒಂದು ಪ್ರವಾಹ. ಸಕಲಕ್ಕೂ ಕಾರಣ ಮನಸ್ಸು- ಮಾಡುವುದು ಯಾವಾಗಲೂ ಸರ್ಕಸ್ಸು. ಅದರ ನಿಯಂತ್ರಣ ಒಂದು ತಪಸ್ಸು-ದೊರೆಯುವುದು ನಮಗಾಗ ಯಶಸ್ಸು"** ಎಂದು ಉಕ್ತಿಗಳನ್ನು ಹೇಳಿ ತಮ್ಮ ಮಾತನ್ನು ಮುಗಿಸಿದರು.

ಭದ್ರಾವತಿ ರೋಟರಿ ಕ್ಲಬ್‌ನಿಂದ ಈ ಕೆಳಕಂಡ ವೃತ್ತಿ ಪರಿಣಿತರಿಗೆ ವ್ಯಕ್ತಿತ್ವ ಮತ್ತು ಅವರ ವೃತ್ತಿಧರ್ಮ ಪಾಲನೆಗಾಗಿ ಗುರುತಿಸಿ ಸನ್ಮಾನಿಸಲಾಯಿತು.

- **ಹಾಲೇಶಪ್ಪ-ಟ್ರಾಫಿಕ್ ಪೋಲಿಸ್ – ರಕ್ತದಾನಿಗಳು ಹಾಗೂ ಪರಿಸರ ಪ್ರೇಮಿಗಳು 3000 ಸಾವಿರ ಸಸಿನೆಟ್ಟು ಪೋಷಿಸಿದವರು.**
- **ಜಿ.ಎನ್. ರಾಜಾರಾವ್, ಆಟೋಚಾಲಕರು –ಸಾರ್ವಜನಿಕ ಸೇವೆ ಸಾವಿರಾರು ಸಸಿ ನೆಟ್ಟು ಪೋಷಣೆ.**
- **ರಾಜಣ್ಣನವರು– ಮಂಗಳ ವಾದ್ಯ ವಾದಕರು – ಸಾರ್ವಜನಿಕ ಸೇವೆ.**
- **ವೆಂಕಟೇಶರಾವ್ – ಸರ್ಕಾರಿ ಆಸ್ಪತ್ರೆ ಸಹಾಯಕರು – ಸಾರ್ವಜನಿಕ ಸೇವೆ.**
- **ರಾಜಾವೇಲು –ಪೌರಕಾರ್ಮಿಕ ಮೇಸ್ತ್ರಿ 30 ವರ್ಷದಿಂದ ಉತ್ತಮ ಸಾರ್ವಜನಿಕ ಸೇವೆ.**

ಇವರುಗಳನ್ನು ಮುಖ್ಯ ಅತಿಥಿಗಳಾದ ಡಾ. ಭೀಮೇಶ್ವರ ಜೋಷಿಯವರು ಮತ್ತು ವೇದಿಕೆಯಲ್ಲಿರುವವರು ಆತ್ಮೀಯವಾಗಿ ಸನ್ಮಾನಿಸಿದರು.

ಜೋನ್ 10 ರ ಸಹಾಯಕ ಗವರ್ನರ್ ರೊ.ಎಸ್.ಆರ್. ನಾಗರಾಜ್‌ರವರು ಮಾತನಾಡಿ, ಇಂದು ಎರಡು ಕ್ಲಬ್‌ಗಳು ಸೇರಿ ಸಂಸ್ಥಾಪನಾ ದಿನವನ್ನು ಆಚರಿಸುತ್ತಿರುವುದು ಸಂತಸದ ವಿಷಯ. ಈ ಭದ್ರಾವತಿಯ ಬಗ್ಗೆ ನನಗೆ ಹೆಮ್ಮೆ ಇದೆ. ಏಕೆಂದರೆ ನನಗೆ ವಿದ್ಯಾಭ್ಯಾಸ ನೀಡಿದುದು ಈ ಊರು. ಆದ್ದರಿಂದ ಇಂದು ನನಗೆ ನನ್ನ ಹುಟ್ಟಿದೂರಿಗೆ ಬಂದೆಂತೆನಿಸುತ್ತಿದೆ  ನನಗೆ ಹೆಮ್ಮೆಯಾಗುತ್ತಿದೆ ಎಂದರು. 14.04.1958 ರೋಟರಿ ಕ್ಲಬ್ ಶಿವಮೊಗ್ಗ 21.01.1960 ರೋಟರಿ ಕ್ಲಬ್ ಭದ್ರಾವತಿಯ ಉದಯವಾಗಿದೆ. ಹಲವಾರು ಸಮುದಾಯ ಸೇವೆಗಳನ್ನು ಮಾಡಿದೆ ಎನ್ನುತ್ತಾ ಎಲ್ಲರಿಗೂ ಶುಭವಾಗಲಿ ಎಂದು ತಮ್ಮ ಮಾತನ್ನು ಮುಗಿಸಿದರು.

ಮುಖ್ಯ ಅತಿಥಿಗಳಾದ ಡಾ.ಭೀಮೇಶ್ವರ ಜೋಷಿಯವರು ಮಾತನಾಡಿ, ಶಿವಮೊಗ್ಗದ ಮಾತೃಸಂಸ್ಥೆಯಿಂದ ಹುಟ್ಟು ಹಾಕಲ್ಪಟ್ಟು 65 ವರ್ಷಗಳ ದೀರ್ಘಕಾಲದಿಂದ ಭದ್ರಾವತಿಯ ಜನತೆಗೆ ಸೇವೆ ಮಾಡುತ್ತಿರುವ ರೋಟರಿ ಭದ್ರಾವತಿಯ ಎಲ್ಲಾ ಸದಸ್ಯರುಗಳಿಗೆ ಅಭಿನಂದಿಸಿದರು. ಈ ರೋಟರಿಯ ಸಾಧನೆಗಳನ್ನು ಕೇಳಿ ಶಿವಮೊಗ್ಗ ರೋಟರಿಯು ಇಂದು ಸಾರ್ಥಕ್ಯ ಕಂಡಿದೆ. ಇಂದು ವೃತ್ತಿಪರರಿಗೆ ಸನ್ಮಾನ ಮಾಡಿದ್ದಾರೆ. ಇದು ಇತರರಿಗೆ ಪ್ರೇರಣೆಯಾಗಿದೆ. ಇಂದಿನ ಯುವಕರಲ್ಲಿ ಒಬ್ಬರಲ್ಲಿನ ಒಳ್ಳೆಯತನ, ವೃತ್ತಿಪರತೆ ಗುರುತಿಸುವ ವ್ಯವಧಾನವೇ ಇಲ್ಲವಾಗಿದೆ. ಆದರೆ ನೀವು ಅವರುಗಳನ್ನು ಬರಮಾಡಿಕೊಂಡು ಗೌರವಿಸುವ ಕೆಲಸ ಮಾಡಿದ್ದೀರಿ. ಜಗದ್ಗುರು ಶಂಕರಾಚಾರ್ಯರು **"ಪರೋಪಕಾರಾರ್ಥಂ ಇದಂ ಶರೀರಂ"** ಎಂದಿದ್ದಾರೆ.  ಜೀವನದಲ್ಲಿ ಕೆಲವೊಮ್ಮೆ ಸತ್ಯ ಕಹಿಯಾಗಿದ್ದರೂ ಒಪ್ಪಿಕೊಳ್ಳಬೇಕಾಗುತ್ತದೆ. ಸೇವೆಯಿಂದಲೇ ಭಾರತಕ್ಕೆ









ಗೌರವ ಬಂದಿದೆ. ಹೃದಯ ಶ್ರೀಮಂತಿಕೆಯನ್ನು ಮತ್ತಷ್ಟು ಶ್ರೀಮಂತಗೊಳಿಸುವ ನಿಟ್ಟಿನಲ್ಲಿ ಭಾರತ ಸಂಭ್ರಮದಲ್ಲಿದೆ. ಇಡೀ ವಿಶ್ವ ಜಗದ್ಗುರು ಸ್ಥಾನವನ್ನು ಭಾರತಕ್ಕೆ ಕೊಟ್ಟಿದೆ. ಇಲ್ಲಿನ ಒಳ್ಳೆ ಸಂಸ್ಕೃತಿ ಸಂಸ್ಕಾರವೇ ಭಾರತದ ಶಕ್ತಿ. ಉದಾತ್ತತೆಯಿಂದ ವಿಶಾಲ ಮನೋಸ್ಥಿತಿಯಿಂದ ಎಲ್ಲರಿಗೂ ಅವಕಾಶ ಕೊಡಬೇಕೆಂಬ ನಮ್ಮ ಭಾರತದ ಪರಂಪರೆಯಿಂದ ಎಲ್ಲರೂ ಬೆಳೆಯಬೇಕು ಎಂಬ ದೃಷ್ಟಿಯಿಂದಲೇ ಈ ಕ್ಲಬ್ 65 ವರ್ಷ ಬಾಳಿದೆ.

ನಿತ್ಯ ಸಂತೋಷ ನಮ್ಮದಾಗಬೇಕು. ಅದಕ್ಕಾಗಿ ಪ್ರಯತ್ನ ಮಾಡಬೇಕು. ಉಪಕಾರ ಮಾಡಲಾಗದಿದ್ದರೂ ಅಪಕಾರ ಸಲ್ಲದು. ಮೊದಲು ನಾವು ಮಾನವರಾಗಬೇಕು. ಸಮಾಜ ಮುಖಿಯಾದ ಕೆಲಸ ನಮ್ಮದಾಗಬೇಕು. ನಮ್ಮ ವ್ಯಕ್ತಿತ್ವದಲ್ಲಿ ಬದಲಾವಣೆ ತರಬೇಕು. ಅದರ ವಿಸ್ತಾರವನ್ನು ನಮ್ಮ ಪಕ್ಕದವರಿಗೆ ಹರಡಬೇಕು. ನಾವು ನಿಂತ ನೀರಾಗಬಾರದು. ದೇಶ ದೇಶಗಳಿಗೆ ನಮ್ಮ ಚಿಂತನೆಗಳನ್ನು ಏನು ನೀಡಬೇಕು ಎಂಬುದನ್ನು ಅರಿಯಬೇಕು. ರೋಟರಿಯಿಂದ ವಿಶ್ವದಾದ್ಯಂತ ಮಾಡಲಸಾಧ್ಯವಾದ ಸಾಧನೆ ಪೋಲಿಯೋ ನಿರ್ಮೂಲನೆ ಯಾಗಿದೆ. ಇದು ಅತ್ಯಂತ ಅಭಿನಂದನೀಯ ಜೊತೆಗೆ ದೇಶದ ಅಭಿವೃದ್ಧಿಗೂ ನಮ್ಮ ಕೊಡುಗೆಗಳಿರಬೇಕು ಎಂದರು. ನಮಗೆ ಮರಣವೂ ಕೂಡ ದೀನತೆಯಿಲ್ಲದೆ ಅನಾಯಾಸವಾಗಿ ಬರಬೇಕು ಎಂದರು.

ಇದೇ ಸಂದರ್ಭದಲ್ಲಿ ವ್ಯಕ್ತಿತ್ವ ವಿಕಸನಕ್ಕೆ ಹೆಚ್ಚು ಒತ್ತು ಕೊಡುವ ಜೇಸಿ ಸಂಸ್ಥೆಯನ್ನು ನೆನೆಯುತ್ತಾ ತಮ್ಮ ವ್ಯಕ್ತಿತ್ವ ರೂಪುಗೊಂಡದ್ದೇ ಅಲ್ಲಿ ಎಂದರು. ಸಮರ್ಪಕವಾಗಿ ವ್ಯಕ್ತಿತ್ವ ರೂಪುಗೊಂಡದ್ದೇ ಆದಲ್ಲಿ ನಮ್ಮಲ್ಲಿ ಸೃಜನ ಶೀಲತೆ ನಿರ್ಮಾಣವಾಗುತ್ತದೆ. ನಾವು ಎಷ್ಟೇ ಎತ್ತರಕ್ಕೆ ಬೆಳೆದರೂ ನಮ್ಮ ಮಾನಸಿಕ ಸ್ಥಿತಿ ದಿವ್ಯದರ್ಶನದಿಂದ ಬದಲಾಗಬೇಕು. ಸ್ನೇಹಕ್ಕೆ ಬೆಲೆ ಕಟ್ಟಲಾಗದು. ಸ್ನೇಹಕ್ಕೆ ಸೇವೆಗೆ ಬೆಲೆ ಇದೆ. ಗೌರವವಿದೆ. ಅದರಿಂದಲೇ ಈ ಸಂಸ್ಥೆಗಳು ಬೆಳೆದಿದೆ ಎಂದು ತಿಳಿಸಿ ಎಲ್ಲರಿಗೂ ಒಳ್ಳೆಯದಾಗಲಿ ಎಂದು ಆಶಿಸಿ ತಮ್ಮ ಮಾತನ್ನು ಮುಗಿಸಿದರು.

ಕೊನೆಯಲ್ಲಿ ವೇದಿಕೆಯಲ್ಲಿದ್ದ ಸರ್ವರೂ ಸೇರಿ ಡಾ. ಭೀಮೇಶ್ವರ ಜೋಷಿಯವರನ್ನು ಸನ್ಮಾನಿಸಿದರು. ಕೊನೆಯಲ್ಲಿ ಭದ್ರಾವತಿ ರೋಟರಿ ಕ್ಲಬ್‌ನ ಕಾರ್ಯದರ್ಶಿ ರೊ.ನಿರಂಜನ್‌ರವರು ಸರ್ವರಿಗೆ ವಂದಿಸಿದರು. ಕಾರ್ಯಕ್ರಮದ ನಂತರ ಪುಷ್ಕಳ ಭೋಜನ ಏರ್ಪಾಡಾಗಿತ್ತು. ❖





**ದಿನಾಂಕ: 21–01–2025 ರಂದು ಆಶಾ ಕಿರಣ ಟೀಚಸ ಟ್ರೈನಿಂಗ್ ಇನ್ಸಿಟ್ಯೂಟ್‌ನಲ್ಲಿರುವ ಶಿಕ್ಷಕರಿಗೆ ಹಾಗೂ ಬೇರೆ ಶಾಲೆಯಿಂದ ಬಂದ ಶಿಕ್ಷಕರಿಗೆ ಕಲಿಕಾ ನ್ಯೂನ್ಯತೆಯ ಬಗ್ಗೆ ತರಬೇತಿ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ರೊ. ವೀಣಾ ಸುರೇಶ್‌ರವರು ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿ ಮಾರ್ಗದರ್ಶನ ಮಾಡಿದರು. ಅಧ್ಯಕ್ಷರಾದ ರೊ. ಕೆ. ಸೂರ್ಯನಾರಾಯಣ ಉಡುಪ, ಕಾರ್ಯದರ್ಶಿರೊ. ಎನ್.ಜಿ. ಉಷಾ ಹಾಗೂ ರೊ. ಎನ್.ವಿ. ಭಟ್, ರೊ. ಕಿಶೋರ್ ಶೀರ್ನಾಳಿ ಮತ್ತು ಟ್ರೈನಿಂಗ್ ಇನ್ಸಿಟ್ಯೂಟ್‌ನ ಚೇರ್ಮನ್ ರೊ. ಡಿ.ಎಸ್. ನಟರಾಜ್, ಪ್ರಿನ್ಸಿಪಾಲ್ ರೊ. ಎ. ಮಂಜುನಾಥ್‌ರವರು ಭಾಗವಹಿಸಿದ್ದರು.**

**ರೋಟರಿಯ ಉದ್ದೇಶ ನಮ್ಮ – ನಿಮ್ಮೆಲ್ಲರ ಸಂಬಂಧಗಳ ಬೆಸುಗೆ**



## ಸಂಪಾದಕೀಯ

### ವಿವೇಕ...

ಲಂಕೆಯಿಂದ ವಿಜಯಶಾಲಿಯಾಗಿ ಸೀತಾ ಮಾತೆಯೊಂದಿಗೆ ಬಂದ ರಾಮನಿಗೆ ಅಯೋಧ್ಯೆಯಲ್ಲಿ ಪಟ್ಟಾಭಿಷೇಕದ ಸಂಭ್ರಮ. ಯುದ್ಧದಲ್ಲಿ ರಾಮನಿಗೆ ಸಹಾಯ ಮಾಡಿದ ಅಷ್ಟೂ ಜನ ವಾನರರೂ ಅಲ್ಲಿ ಆಮಂತ್ರಿತರಾಗಿದ್ದರು. ಅಲಂಕೃತಗೊಂಡ ಅಯೋಧ್ಯೆಯನ್ನು ನೋಡಿ ಸ್ವರ್ಗವೇ ಭೂಲೋಕಕ್ಕೆ ಬಂತೇನೋ ಎನ್ನುವಷ್ಟು ಅವರು ಸಂಭ್ರಮಿತರಾಗಿದ್ದರು. ಮಕ್ಕಳು ಮರಿಗಳೊಂದಿಗೆ ಬಂದವರಿಗೆ ಯಾವ ಕೊರತೆಯೂ ಆಗಬಾರದೆಂದು ರಾಮ ಕಟ್ಟಪ್ಪಣೆ ಮಾಡಿದ್ದರಿಂದ ಅವರಿಗೆ ಪ್ರತ್ಯೇಕ ವ್ಯವಸ್ಥೆಯನ್ನು ಮಾಡಲಾಗಿತ್ತು.

ಅರಮನೆಯ ಭೋಜನಶಾಲೆಗೆ ಬಿಡುವೇ ಇಲ್ಲ. ವಿಧವಿಧವಾದ ಭಕ್ಷ್ಯಗಳ ತಯಾರಿ ನಡೆಯುತ್ತಲೇ ಇತ್ತು. ಕಾಡಿನಲ್ಲೇ ಹುಟ್ಟಿ ಬೆಳೆದು ನಾರು ಬೇರು ಗೆಡ್ಡೆ ಗೆಣಸುಗಳಿಂದ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದ ಕಪಿಗಳಿಗೆಲ್ಲಾ ಬಗೆಬಗೆಯ ಊಟವನ್ನು ತಿನ್ನುವ ಹೊಸ ಅನುಭವ. ಅದು ಅವರೇ ಕಾಳಿನ ಕಾಲ. ಹಾಗಾಗಿ ಅವರೆ ಕಾಳಿನ ಸಾಂಬಾರನ್ನು ಮಾಡಲಾಗಿತ್ತು. ಎಲ್ಲ ಕಪಿಗಳೂ ಊಟಕ್ಕೆ ಕೂತಿರುವಾಗ ಬಡಿಸಿದ್ದ ಅವರೆ ಕಾಳೊಂದನ್ನು ಮರಿಕಪಿ ಹಿಸುಕಿತು. ಸಿಪ್ಪೆಯಿಂದ ಬೇರ್ಪಟ್ಟ ಒಳಗಿನ ಕಾಳು ಮೇಲಕ್ಕೆ ಪುಟಿಯಿತು. ಇದನ್ನು ನೋಡಿದ ಮರಿ ಕಪಿ, 'ಅರೇ ನೀನು ನೆಗೀತಿಯಾ ನಿನಗಿಂತಲೂ ನಾನು ಜಾಸ್ತಿ ನೆಗೆಯುತ್ತೇನೆ ನೋಡು' ಎಂದು ನೆಗೆದು ಕುಳಿತುಕೊಂಡಿತು. ಅದನ್ನು ನೋಡಿ ಪಕ್ಕದಲ್ಲಿ ಕುಳಿತಿದ್ದ ಇನ್ನೊಂದು ಕಪಿ ' ನಿನಗಿಂತ ನಾನು ಜಾಸ್ತಿ ಎತ್ತರಕ್ಕೆ ನೆಗೆಯುತ್ತೇನೆ' ಎಂದು ನೆಗೆದು ಕುಳಿತುಕೊಂಡಿರು.

ಹೀಗೆ ಒಂದಾದ ಮೇಲೆ ಇನ್ನೊಂದರಂತೆ ಎಲ್ಲ ಕಪಿಗಳು ನೆಗೆದು ಕುಳಿತುಕೊಂಡವು. ಕಡೆಯಲ್ಲಿ ಆಂಜನೇಯನ ಸರದಿ ಬಂತು. ಎಲ್ಲರಂತೆ ಅವನು 'ನಿಮಗಿಂತ ನಾನೇನು ಕಡಿಮೆ' ಎಂದು ಸೀದಾ ಆಕಾಶಕ್ಕೆ ನೆಗೆದು ಕೂತ. ಇದನ್ನೆಲ್ಲಾ ನೋಡುತ್ತಿದ್ದ ರಾಮ ಅಚ್ಚರಿಯಿಂದ, 'ಏನಾಯಿತು' ಎಂದು ಆಂಜನೇಯನನ್ನು ಕೇಳಿದ. ಆಂಜನೇಯ 'ನನ್ನ ಪಕ್ಕದವ ನೆಗೆದ ಅದಕ್ಕೆ ಅವನಿಗಿಂತ ಎತ್ತರಕ್ಕೆ ನೆಗೆಯಬೇಕೆಂದು ನೆಗೆದೆ' ಎಂದ. ರಾಮ ಪಕ್ಕದ ಕಪಿಯನ್ನು ಕೇಳಿದ ಅದು ಕೂಡಾ ಪಕ್ಕದವ ನೆಗೆದಿದ್ದಕ್ಕೆ ನೆಗೆದೆ ಎನ್ನುವ ಉತ್ತರವನ್ನೇ ಕೊಟ್ಟಿತು. ಕಡೆಗೆ ಮೊದಲು ನೆಗೆದ ಕಪಿಮರಿಯ ಬಳಿಗೆ ಬಂದಾಗ ಅದು ಅವರೆ ಕಾಳಿನ ಬಗ್ಗೆ ಹೇಳಿತು.

ರಾಮ ನಕ್ಕ, 'ಹನುಮ ನೀನು ಲಂಕೆಗೆ ಹಾರಿದವನು, ಲಕ್ಷ್ಮಣ ಮೂರ್ಛೆಗೊಂಡಾಗ ಗಿಡಮೂಲಿಕೆಯನ್ನು ತೆಗೆದುಕೊಂಡು ಬಾ ಎಂದರೆ ಸಂಜೀವಿನಿ ಪರ್ವತವನ್ನೇ ತಂದವನು. ನಿನ್ನ ಸಾಧನೆಯೇನೂ ಕಡಿಮೆಯಿಲ್ಲ. ನಿನ್ನ ಶಕ್ತಿಯೂ ಅಗಾಧ. ಹಾಗಿದ್ದೂ, ಅವನ್ನೆಲ್ಲಾ ಮರೆತು ನೀನು ಕೂಡ ಬೇರೆ ಕಪಿಗಳ ಜೊತೆ ಸೇರಿ ನಿಮಗಿಂತ ನಾನು ದೊಡ್ಡವನು ಎನ್ನುತ್ತೀಯಲ್ಲ? ಏನು ಹೇಳಲಿ? ಸಾಮಾನ್ಯರು ಹೀಗೆ ತಮ್ಮನ್ನು ಮರೆತುಹೋಗುವುದು ಸಹಜ. ಆದರೆ ನೀನಲ್ಲ. ಯಾವತ್ತೂ ನೀನು ಮಾಡಿರುವ ಸಾಧನೆಯನ್ನು ನೆನಪಿಟ್ಟುಕೋ ಅದಕ್ಕಿಂತ ದೊಡ್ಡದನ್ನೇ ನಾದರೂ ಮಾಡು. ಅದನ್ನು ಮರೆತು ಹೀಗೆ ಚಿಕ್ಕವನ ಥರ ಆಡಬೇಡ' ಎಂದ. ಆಂಜನೇಯನಿಗೆ ನಿಜಕ್ಕೂ ನಾಚಿಕೆಯಾಯಿತು. ಆಗ ರಾಮ, 'ಹನುಮ ಎಂಥದ್ದೇ ಹೊತ್ತಿನಲ್ಲಾದರೂ ನಾವೇನು ಎನ್ನುವುದನ್ನು ಮರೆಯಬಾರದು ಆಗ ನಮ್ಮ ವ್ಯಕ್ತಿತ್ವಕ್ಕೂ, ಸಾಧನೆಗೂ ಘನತೆ ಸಿಗುತ್ತದೆ' ಎಂದ. ಇದಲ್ಲವೇ ವಿವೇಕ.

• ರೊ. ಎಂ. ಮಾಧವಾಚಾರ್



ದಿನಾಂಕ: 20-01-2025ರಂದು ಬೋರ್ಡ್ ಮೀಟಿಂಗ್ ನಡೆಯಿತು.

## ❈ Wedding Anniversary ❈



| | |
|---|---|
| Narendra Jain & Sunitha Jain | 23rd Jan |
| Sunil Sastry H.U. &ShruthiSastry | 28th Jan |
| K.S.Shailin & Sheela H.M. | 28th Jan. |

## ಚಿಂತನ

ಇರಬೇಕಿಲ್ಲ ನಾವು ಅವರಂತೆ ಇವರಂತೆ
ಇದ್ದರೆ ಸಾಕು ಯಾರಿಗೂ ಹೊರೆಯಾಗದಂತೆ
ಬೇಕಿಲ್ಲ ನಮಗೆ ಅವರು ಹಾಗಂತೆ ಹೀಗಂತೆ
ನಮ್ಮಿಷ್ಟಕ್ಕೆ ನಾವಿದ್ದರೆ ಇಲ್ಲ ಬೇರಾವ ಚಿಂತೆ
ಸುಖದುಃಖ ಏನಾದರೇನಂತೆ
ಸ್ವೀಕರಿಸೋಣ ಬಂದುದನ್ನು ಬಂದಂತೆ.

– ರೊ. ಕೆ. ಸೂರ್ಯನಾರಾಯಣ ಉಡುಪ

**ಚತುರ್ವಿಧ ಪರೀಕ್ಷೆ– ನಮ್ಮ ಚಿಂತನೆ, ಆಡುವ ಮಾತು ಅಥವಾ ಕೃತಿಗಳಲ್ಲಿ...**

1. ಇದು **ಸತ್ಯವೇ?**
2. ಇದು ಸಂಬಂಧಪಟ್ಟ ಎಲ್ಲರಿಗೆ **ನ್ಯಾಯ ಸಮ್ಮತವೇ?**
3. ಇದು **ಸದ್ಭಾವನೆ** ಮತ್ತು **ಉತ್ತಮ ಸ್ನೇಹ ಸಂಬಂಧವನ್ನು** ಬೆಳೆಸಬಲ್ಲುದೇ ?
4. ඇದು ಸಂಬಂಧಪಟ್ಟ ಎಲ್ಲರಿಗೆ **ಪ್ರಯೋಜನಕಾರಿಯೇ?**

## Rotary Information
## DISTRICT PROJECTS 2024-25

1. Awareness of Arogya Swatchatha
2. Awareness of Education & Law
3. Awareness of Green & Water
4. Awareness of Rasthe Sanchara Safety

To,

*Book Post*